ಪೇಂಟರ್ ಪಾಪು, ಸಂತೇಮರಹಳ್ಳಿ
*ಮದುವೆ ಎಂದರೇನು?*



ಜೀವನವೆಂಬ ಮೆಗಾಸೀರಿಯಲ್‌ಗೆ ಮಾವ ಪ್ರಾಯೋಜಿಸಿದ ಜಾಹೀರಾತು.

ಕು.ಗೋ., ಉಡುಪಿ
*ನೀವ್ಯಾಕೆ ಇನ್ನೂ ಪ್ರಶಸ್ತಿ ವಾಪಸ್ ಕೊಟ್ಟಿಲ್ಲ?*
ಮಾಲೆ ಹಾಕಿದವರನ್ನು ಕಾಮಾಲೆ ಕಣ್ಣಿಂದ ನೋಡಬೇಡಿ.

ಎಂ.ಎ. ಕುಮಾರ್, ಮಲ್ಲೇಶ್ವರ
*ಒಂದು ಕಡೆ ಸಮಾನವಾದ ಹಣ, ಇನ್ನೊಂದೆಡೆ ಒಡವೆ ಇಟ್ಟಿದ್ದಲ್ಲಿ ಹೆಣ್ಣು ಯಾವುದನ್ನು ಆಯ್ಕೆ ಮಾಡಿಕೊಳ್ಳಬಹುದು?*
ಒಡವೆ ತಾನು ಆಯ್ಕೆ ಮಾಡಿ, ಹಣ ನಿಮ್ಮ ಕೈಗಿತ್ತು, ಶಾಪಿಂಗ್‌ಗೆ ಕರೆದುಕೊಂಡು ಹೋಗಬಹುದು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ರೆಸಾರ್ಟ್ ರಾಜಕೀಯ ಎಂದರೇನು?*
ಮೊದಲಿಗೆ ಸಾರ್ಟ್ ಆಗದುದನ್ನು ರಿ–ಸಾರ್ಟ್ ಮಾಡುವ ಯತ್ನ.

ನವಿರವಿ, ಬಾಳೆಹೊನ್ನೂರು
*ನಾವು ಹಾವನ್ನು ಸಾಯಿಸಿದರೆ ಸರ್ಪದೋಷ; ಹಾವುಗಳು ನಮ್ಮನ್ನು ಸಾಯಿಸಿದರೆ?*




ಹುತ್ತಾತ್ಮ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಪ್ರತಿ ಯಶಸ್ವೀ ಮಹಿಳೆಯ ಹಿಂದೆಯೂ ಒಬ್ಬ ಪುರುಷನಿರುತ್ತಾನಾ?*
ಹಾಗೇನಿಲ್ಲ. ಯಶಸ್ವಿಯಾಗದಿದ್ದರೂ ಇರುತ್ತಾನೆ.

ಎನ್.ಎಸ್. ಆನಂದ್, ಬೆಂಗಳೂರು
*ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದು ಯಾವಾಗ?*
ಹುಚ್ಚುಮಳೆಯಲ್ಲಿ ಹೊಚ್ಚಹೊಸ ಕಾರೊಂದು ಅದರ ಕೆಳಗೆ ಬಂದ ತಕ್ಷಣ!

ದಿನೇಶ್ ಗುಡ್ಡದೂರು, ಆಲ್ದೂರು
*ಸ್ತ್ರೀ ದೇವತೆಗಳಿಗೇಕೆ ಶ್ರೀ ನಾಮಧೇಯ?*
ಭಕ್ತರಿಗೆ ಬೇಕಾಬಿಟ್ಟಿ ವರಗಳನ್ನು ಕೊಟ್ಟಿದ್ದರಿಂದ 'ಶ್ರೀಮತಿ'ಯಲ್ಲಿ ಮತಿ ಹಾಳಾಗಿ ಶ್ರೀ ಮಾತ್ರ ಉಳಿಯಿತಂತೆ.

ಎನ್. ವಸಂತಾ, ಬೆಂಗಳೂರು
*ಸ್ತ್ರೀಯನ್ನು ಕುಸುಮಕ್ಕೆ ಹೋಲಿಸುವ ಮಂದಿ ಪುರುಷನನ್ನು ಯಾರಿಗೆ ಹೋಲಿಸುತ್ತಾರೆ?*
ಹೂ ಕಳ್ಳರಿಗೆ!

ಬಿ. ಚಂದ್ರೇಗೌಡ, ಬೆಂಗಳೂರು
*ಮದುವೆ ಆಗುವುದನ್ನು ಕೈ ಹಿಡಿಯುವುದು ಅನ್ನೋದ್ಯಾಕೆ?*
ಅವತ್ತಿನಿಂದ ಪ್ರತಿ ರೂಪಾಯನ್ನೂ ಬಿಂದಾಸಾಗಿ ಖರ್ಚು ಮಾಡದೆ ಕೈ ಹಿಡಿದೇ ಖರ್ಚು ಮಾಡಬೇಕಾದ್ದರಿಂದ.

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಇಲ್ಲೊಬ್ಬರು ಯುವದಂಪತಿಗೆ ಹತ್ತು ಮಕ್ಕಳನ್ನು ಪಡೆದು ಸುಖವಾಗಿರಿ ಎಂದು ಹರಸಿದುದೇಕೆ?*
ತಿಳಿಯಿತು. ಅವರು ಬೇಬಿ ಪ್ರಾಡಕ್ಟ್ಸ್ ಮಾರುವವರಂತೆ.

ಜಾವಳಿ ಜಯಣ್ಣ, ದಾವಣಗೆರೆ
*ಬೈಕ್+ಡಬಲ್ ರೈಡ್+ಮೊಬೈಲ್+ಹೆವಿ ಟ್ರಾಫಿಕ್ = ?*
ನಥಿಂಗ್; ಟ್ರಾಫಿಕ್ ಜಾಮ್; ಬೈಕ್ ಸ್ಲಾಪಿಂಗ್; ಮೆಸೇಜಿಂಗ್, ವಾಟ್ಸಪಿಂಗ್, ಚಾಟಿಂಗ್ ಚಾಟಿಂಗ್ ಚಾಟಿಂಗ್...

ಶಿರಾಲಿ ದೀಪಕ್ ಶೇಟ್, ಬೆಂಗಳೂರು
*ಅತ್ಯಂತ ಸುಲಭವಾದ ದಾನ ಯಾವುದು?*
ಇಷ್ಟೂ ನೋವು, ಆಯಾಸ ಆಗದ ನೇತ್ರದಾನ, ದೇಹದಾನ.

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ಅನ್ನದ ಋಣ ಕೆಟ್ಟದ್ದು ಎನ್ನುತ್ತಾರೆ. ಯಾಕೆ?*
ಅನ್ನದ ಅಷ್ಟೇ ಅಲ್ಲ, ಅನ್ನುವ ಋಣವೂ ಕೆಟ್ಟದ್ದೇ; ಋಣ ಇಟ್ಟುಕೊಳ್ಳಬಾರದೆಂದರೆ ಅನ್ನಿಸಿಕೊಂಡ ತಕ್ಷಣ ಅಂದುಬಿಡಬೇಕು!

## ಬಹುಮಾನಿತ ಪ್ರಶ್ನೆ

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ
*ಗೋರಿಗಳ ಮೇಲೆ ಕಲ್ಲು ನೆಡಲು ಕಾರಣವೇನು?*
ಒಳಗೆ ಮಲಗಿರುವವರು ಮೇಲೆ ಬಂದಾಗ ಒರಗಿ ಕೂರಲು.

ಮಂಜುಳಾ ಅಲಕುಂದಿ, ಗದಗ
*ನಿಬಂಧ, ಪ್ರಬಂಧ ಬರೆಯಲು ಹೇಳಿಕೊಡುವ ಶಿಕ್ಷಕರು ಪ್ರೇಮಪತ್ರ ಬರೆಯುವುದನ್ನು ಹೇಳಿಕೊಡುವುದಿಲ್ಲವಲ್ಲಾ...?*
ನಿಮ್ಮ ಪದಗಳಾದ ಡ್ಯೂಡ್, ಡ್ಯುಡೆಟಿ, ಮಚ್ಚಾ, ಮಗಾ, ಪೀಸು, ಜೊಲ್ಲುಗಳು ಅವರಿಗೆ ತಿಳಿಯದಲ್ಲ.

ಅನಂತಪದ್ಮನಾಭ ಹೆಚ್.ಎಂ. ಮೈಸೂರು
*ಕೊಚ್ಚು, ಕಚ್ಚು, ಚುಚ್ಚು, ಹಚ್ಚು, ಹುಚ್ಚು, ಮಚ್ಚು, ಮುಚ್ಚು ಮತ್ತು ಸಂಸತ್ತು ಪದಗಳಿಗೆ ಇರುವ ಸಂಬಂಧವೇನು?*
ಮೊದಲ 4 ಹೈಸ್ಕೂಲ್; 5, 6 ಪದವಿ; 7 ಸ್ನಾತಕೋತ್ತರ; 8ನೆಯದು ಪಿಹೆಚ್‌ಡಿ – ಪುಢಾರಿಯ ಶಿಕ್ಷಣದ್ದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮದು ಪ್ರಜಾಪ್ರಭುತ್ವವೋ, ವಂಶಾಡಳಿತವೋ?*



ಮಜಾಪ್ರಭುತ್ವ.

ಎಸ್. ಕೃಷ್ಣಮೂರ್ತಿ, ಬೆಂಗಳೂರು
*ಚತುರ್ಮುಖ ಬ್ರಹ್ಮ ಎಡ ಅಥವಾ ಬಲ, ಯಾವ ಕಡೆ ಮಲಗಿ ನಿದ್ರಿಸುತ್ತಾನೆ?*
ಅವನದು ಸದನದವರಂತೆ ವಿಶಿಷ್ಟ ನಿದ್ರೆ. ಕುಳಿತಲ್ಲೇ ನಿದ್ರಿಸುತ್ತಾನೆ. ಒಂದೊಂದು ತಲೆಗೆ ಆರಾರು ಗಂಟೆಯ ಪಾಳಿ.

ಕುಮಾರ ಚಲವಾದಿ, ಹೊಳೆನರಸಿಪುರ
*ಗಂಡಸರ ಶಕ್ತಿ ಮತ್ತು ದೌರ್ಬಲ್ಯ ಯಾವುದು?*
ಗಂಡಸರ ಶಕ್ತಿ ಹೆಣ್ಣು; ದೌರ್ಬಲ್ಯವೂ ಅದೇ.

ಕೆ.ಯಂ. ವೀರೇಶ್, ಕೂಡ್ಲಿಗಿ
*ಸೀತಾರಾಮು ಭಾಗ-2 ಚಲನಚಿತ್ರ ಮಾಡಬೇಕೆಂದಿದ್ದೇವೆ. ನೀವು ಶಂಕರ್‌ನಾಗ್ ಪಾತ್ರ ಮಾಡುವಿರೋ, ಮಂಜುಳಾರದೋ?*
ಇಂಟರ್‌ವೆಲ್‌ವರೆಗೂ ಮಂಜುಳಾ ಪಾತ್ರ; ನಂತರ ಶಂಕರ್‌ನಾಗ್ ಪಾತ್ರ.

■ ರಾಮ್